
ಈಶ್ವರ ಬಡಿಗೇರ

# ಸ್ಮರಣಿಕೆ

★ ಸುಶೀಲಾ. ಆರ್. ರಾವ್

ಅನೀಶ್ ಮೂರು ವಸಂತ ಸಮೀಪಿಸುತ್ತಿರುವ ಮುದ್ದು ಕಂದ. ನಗು, ಅಳು ಎರಡರಲ್ಲೂ ರಂಜಿಸಬಲ್ಲ ಪುಟ್ಟ ಹೂದಳದಂತಹ ಸುಕೋಮಲ ತುಟಿಗಳು, ಗುಂಗುರು ಕೂದಲು, ಹೊಳಪು ಕಂಗಳು ಮೂಲದಲ್ಲಿ ಶೋಭಾಯಮಾನ. ಹೆಚ್ಚಾಗಿ ಸುಪ್ರಸನ್ನತೆಯ ಮುಖಭಾವ. ಅದನ್ನೇ ಹೊದ್ದ ಹಾವಭಾವಗಳು. ಆದರೂ ಒಮ್ಮೊಮ್ಮೆ ಹಟಮಾರಿತನ. ಕುಸು ಕುಸು ಪ್ರಾರಂಭಿಸಿದನೆಂದರೆ ಕ್ರಮೇಣ ಅದರ ತಾರಕಾವಸ್ಥೆ... ಗಟ್ಟಿ ಅಳುವಿನ ಕಹಳೆ ಊದುತ್ತಿದ್ದ. ಇಷ್ಟವಾದ ಹೊಸ ಆಟಿಗೆಗಳೂ ಒಂದೆರಡು ದಿನಗಳಲ್ಲಿ ಹಳೆಯ ಸರಕೆನಿಸಿ ಮೂಲೆಗುಂಪು ಮಾಡುತ್ತಿದ್ದ. ಎತ್ತಿ ಎತ್ತಲೋ ಎಸೆದನೆಂದರೆ ಬೇರೇನು ಅರ್ಥವಿದ್ದೀತು?

ಅವನು ಹಾಗೆ ರಚ್ಚೆ ಹಿಡಿದು ಅಳುವ ಸಂದರ್ಭಗಳಲ್ಲಿ ಮನೆಯವರು ಹೊಸ ತಂತ್ರ ಹಿಡಿಯಬೇಕಿತ್ತು. ಮನೆಯವರೆಂದರೆ ತಂದೆ ವಿನೀತ್, ತಾಯಿ ಸಹನಾ, ಅಜ್ಜ ಆನಂದರು ಮತ್ತು ಅಜ್ಜಿ ಲಕ್ಷ್ಮೀದೇವಿ. ಒಬ್ಬೊಬ್ಬರಾಗಿ ಸರದಿ ಹಿಡಿದವರಂತೆ ಮುಂದೆ ಬಂದು ನಾಯಿ ಬಂತು, ಬೆಕ್ಕು ನೋಡು, ಅಕೋ ಅಲ್ಲಿ ಹಕ್ಕಿ ಹಾರಿ ಬಂತು.' ಎನ್ನುತ್ತ 'ಬೌ ಬೌ... ಮ್ಯಾಂವ್, ಮ್ಯಾಂವ್... ಕಾ ಕಾ...'